ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

CIN NO: U40109KA2004SGC035177
ವೆಬ್‌ಸೈಟ್:www.cescmysore.org

ನಿಗಮದ ಅಧಿಕೃತ

| | | |
|---|---|---|
| ದೂರವಾಣಿ ಸಂಖ್ಯೆ:08224-297504<br>ದೂರವಾಣಿ ಸಂಖ್ಯೆ:08224-268845<br>ಇಮೇಲ್: aeehanur@cescmysore.org<br>ceschanur@gmail.com | ನಿಗಮ ಕಾರ್ಯಾಲಯ<br>ನಂ.29, ವಿಜಯನಗರ 2ನೇ ಹಂತ<br>ಹಿನಕಲ್, ಮೈಸೂರು-570 017. | ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)<br>ರವರ ಕಛೇರಿ, ಚಾ.ವಿ.ಸ.ನಿ.ನಿ. ಉಪವಿಭಾಗ,<br>ಹನೂರು - 571439 |
| ಸಂ.ಸಕಾನಿಇಂ(ವಿ)/ಸಇ(ತಾಂ)/ಹಉವಿ/2019-20 | 1270 | ದಿನಾಂಕ: 24.09.2019 5-10-19 |


# -: ಜನ ಸಂಪರ್ಕ ಸಭೆ :-

## ನಡಾವಳಿ

ದಿನಾಂಕ 24.09.2019 ರಂದು ಹನೂರು ಉಪವಿಭಾಗದಲ್ಲಿ ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕೊಳ್ಳೇಗಾಲ ವಿಭಾಗ , ಚಾವಿಸನಿನಿ ರ ಅಧ್ಯಕ್ಷತೆಯಲ್ಲಿ ನಡೆದ ಜನಸಂಪರ್ಕ ಸಭೆಯಲ್ಲಿ ಹನೂರು ಉಪವಿಭಾಗಕ್ಕೆ ಸಂಬಂದಿಸಿದಂತೆ ಬಂದ ದೂರುಗಳು ಹಾಗೂ ತೆಗೆದುಕೊಂಡ ಕ್ರಮಗಳು ಈ ಕೆಳಗಿನಂತಿರುತ್ತವೆ.

**ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು**

ಶ್ರೀಯುತರು: ಪದನಾಮ.

1. ಶ್ರೀ.ಟಿ.ಪ್ರದೀಪ್ : ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವಿಭಾಗ ಕಛೇರಿ, ಕೊಳ್ಳೇಗಾಲ.
2. ಶ್ರೀ.ಎ.ಎಂ.ಶಂಕರ್ : ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಹನೂರು ಉಪವಿಭಾಗ.
3. ಶ್ರೀ.ಬಿ.ರಂಗಸ್ವಾಮಿ : ಸಹಾಯಕ ಇಂಜಿನಿಯರ್(ವಿ), ತಾಂತ್ರಿಕ ಶಾಖೆ, ಹನೂರು ಉಪವಿಭಾಗ ಹಾಗೂ ಶಾಖಾಧಿಕಾರಿ ರಾಮಾಪುರ ಶಾಖೆ,
4. ಶ್ರೀ.ನೌಷದ್ ಪಾಷ : ಕಿರಿಯ ಇಂಜಿನಿಯರ್(ವಿ), ಲೊಕ್ಕನಹಳ್ಳಿ ಶಾಖೆ, ಹನೂರು ಉಪವಿಭಾಗ.
5. ಶ್ರೀ.ಆರ್.ಭಾಸ್ಕರ್ : ಪ್ರಭಾರ ಕಿರಿಯ ಇಂಜಿನಿಯರ್(ವಿ), ಕೌದಳ್ಳಿ ಶಾಖೆ, ಹನೂರು ಉಪವಿಭಾಗ.
6. ಶ್ರೀ.ಬಿ.ಬಿ.ನಾಗರಾಜು : ಪ್ರಭಾರ ಕಿರಿಯ ಇಂಜಿನಿಯರ್(ವಿ), ಮಹದೇಶ್ವರಬೆಟ್ಟ ಶಾಖೆ, ಹನೂರು ಉಪವಿಭಾಗ.
7. ಶ್ರೀ.ಮಹಮ್ಮದ್ ರಿಯಾಜ್ : ಪ್ರಭಾರ ಹಿರಿಯ ಸಹಾಯಕ, ಕಂದಾಯ ಶಾಖೆ. ಹನೂರು ಉಪವಿಭಾಗ.

ಶ್ರೀ. ಟಿ.ಪ್ರದೀಪ್, ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವಿಭಾಗ ಕಛೇರಿ, ಕೊಳ್ಳೇಗಾಲ ರವರು ಸಭೆಗೆ ಹಾಜರಿದ್ದ ಗ್ರಾಹಕರನ್ನು ಸ್ವಾಗತಿಸಿದರು. ನಂತರ ಗ್ರಾಹಕರು ಸಭೆಯಲ್ಲಿ ಸಲ್ಲಿಸಿದ ಅಹವಾಲುಗಳ ಬಗ್ಗೆ ಈ ಕೆಳಕಂಡಂತೆ ಚರ್ಚಿಸಿ ಸೂಕ್ತ ಮಾಹಿತಿಯನ್ನು ನೀಡಿರುತ್ತಾರೆ.

| ಕ್ರ.ಸಂ. | ಗ್ರಾಹಕರ ಹೆಸರು ಮತ್ತು ವಿಳಾಸ | ದೂರು | ಅನುಸರಣೆ |
|---|---|---|---|
| 1 | ಪ್ರಸಾದ್, ಕಿಸ್ವಾನ್ ಸಂಘ, ಶ್ಯಾಗ್ಯ ಗ್ರಾಮ | ಮೀಟರ್ ಬದಲಾಯಿಸಿರುವುದರಿಂದ ಖಜಟಜ ಕೊಡುತ್ತಿದ್ದು, ಈವಾಗ ಒಟ್ಟಾಗಿ ಬಿಲ್ಲು ನೀಡಿರುವುದರಿಂದ ಗ್ರಾಹಕರಿಗೆ ಹೊರೆಯಾಗುತ್ತಿದೆ ಎಂದು ದೂರಿರುತ್ತಾರೆ. | ಕಾರ್ಯನಿರ್ವಾಹಕ ಇಂಜಿನಿಯರ್(ವಿ)ರವರು ಮಾತನಾಡಿ, ಹಿರಿಯ ಸಹಾಯಕರಿಗೆ ಕೂಡಲೇ ಸರಿಪಡಿಸಲು ಸೂಚಿಸಲಾಯಿತು. |
| 2 | ಪ್ರಸಾದ್, ಕಿಸ್ವಾನ್ ಸಂಘ, ಶ್ಯಾಗ್ಯ ಗ್ರಾಮ | ಪರಿವರ್ತಕಗಳಿಗೆ ಬೇಕಾದ ಡಿ.ಒ.ಲ್.ಒ ಮತ್ತು ಎಲ್.ಟಿ.ಕಿಟ್ ಗಳನ್ನು ಗ್ರಾಹಕರಿಂದ ಖರೀದಿಸಿ ದುರಸ್ತಿ ಮಾಡಿಸುತ್ತಿದ್ದಾರೆ ಎಂದು ದೂರಿರುತ್ತಾರೆ ಹಾಗೂ ಅನೇಕ ಪರಿವರ್ತಕಗಳಿಗೆ ಡಿ.ಒ.ಲ್.ಒ ಮತ್ತು ಎಲ್.ಟಿ.ಕಿಟ್ ಗಳ ಅವಸ್ಯಕತೆ ಇದ್ದು ಅವುಗಳನ್ನು ಅಳವಡಿಸಿಕೊಡಿ ಎಂದು ಕೋರಿರುತ್ತಾರೆ. | ಕಾರ್ಯನಿರ್ವಾಹಕ ಇಂಜಿನಿಯರ್(ವಿ)ರವರು ಮಾತನಾಡಿ, ಡಿ.ಒ.ಲ್.ಒ ಮತ್ತು ಎಲ್.ಟಿ.ಕಿಟ್ ಗಳನ್ನು ಇಲಾಖೆಯು ಪ್ರತೀ ಶಾಖೆಗಳಿಗೂ ಒದಗಿಸಿ ಕೊಡಲಾಗಿರುತ್ತದೆ. ಆದ್ದರಿಂದ ಗ್ರಾಹಕರು/ರೈತರು ಖರೀದಿಸುವ ಅಗತ್ಯವಿಲ್ಲವೆಂದು ತಿಳಿಸಿರುತ್ತಾರೆ. |

| | | | |
|---|---|---|---|
| 3 | ಪ್ರಸಾದ್, ಕಿಸ್ಸಾನ್ ಸಂಘ, ಶ್ಯಾಗ್ಯ ಗ್ರಾಮ | ವಿಫಲವಾದ ಪರಿವರ್ತಕಗಳನ್ನು ಇಲಾಖೆಯ ಲಾರಿಯ ಬದಲಾಗಿ ಖಾಸಗಿ ವಾಹನ/ ಆಟೋಗಳ ಮೂಲಕ ಸಾಗಿಸುತ್ತಿದ್ದು ಗ್ರಾಹಕರಿಗೆ ತೊಂದರೆಯಾಗುತ್ತಿದೆ ಎಂದು ದೂರಿರುತ್ತಾರೆ | ಕಾರ್ಯನಿರ್ವಾಹಕ ಇಂಜಿನಿಯರ್(ವಿ)ರವರು ಮಾತನಾಡಿ, ವಿಫಲವಾದ ಪರಿವರ್ತಕಗಳನ್ನು ಇಲಾಖೆಯ ವಾಹನ/ಲಾರಿಯಲ್ಲಿಯೇ ಅಳವಡಿಸಿಕೊಡುವುದಾಗಿ ತಿಳಿಸಿದರು ಮತ್ತು ಎಲ್ಲಾ ಶಾಖಾಧಿಕಾರಿಗಳು ಸೂಕ್ತ ಕ್ರಮವಹಿಸಲು ಸೂಚಿಸಲಾಯಿತು. |
| 4 | ಪ್ರಸಾದ್, ಕಿಸ್ಸಾನ್ ಸಂಘ, ಶ್ಯಾಗ್ಯ ಗ್ರಾಮ | ಹಲಗಾಪುರ ಗ್ರಾಮದ 100ಕೆ.ವಿ.ಎ. ಅಣ್ಣಯ್ಯಪ್ಪ ಪರಿವರ್ತಕವು ಅಧಿಕ ಭಾರದಿಂದ ಪದೇ ಪದೆ ವಿಫಲಗೊಳ್ಳುತ್ತಿದ್ದು ಸದರಿ ಪರಿವರ್ತಕಕ್ಕೆ ಹೆಚ್ಚುವರಿ ಪರಿವರ್ತಕ ಅಳವಡಿಸಿಕೊಡಲು ಕೋರಿರುತ್ತಾರೆ. | ಕಾರ್ಯನಿರ್ವಾಹಕ ಇಂಜಿನಿಯರ್(ವಿ)ರವರು ಮಾತನಾಡಿ ಶಾಖಾಧಿಕಾರಿಗಳು ಖುದ್ದು ಸ್ಥಳ ಪರಿಶೀಲಿಸಿ ವರದಿಯನ್ನು ಉಪ-ವಿಭಾಗ ಹಾಗೂ ವಿಭಾಗ ಕಛೇರಿಗೆ ನೀಡಲು ತಿಳಿಸಿದರು. |
| 5 | ಪ್ರಸಾದ್, ಕಿಸ್ಸಾನ್ ಸಂಘ, ಶ್ಯಾಗ್ಯ ಗ್ರಾಮ | ನಿಗಮದ ಅಧಿಕಾರಿಗಳು ಹಾಗೂ ನೌಕರರು ಇಲಾಖೆಯ ಅಧಿಕೃತ ಗುರುತಿನ ಚೀಟಿಯನ್ನು ಕರ್ತವ್ಯ ನಿರ್ವಹಿಸುವ ವೇಳೆ ಧರಿಸುವಂತೆ ಸೂಚಿಸಲು ಕೋರಿರುತ್ತಾರೆ. | ಕಾರ್ಯನಿರ್ವಾಹಕ ಇಂಜಿನಿಯರ್(ವಿ)ರವರು ಮಾತನಾಡಿ, ಈಗಾಗಲೇ ಗುರುತಿನ ಚೀಟಿಗಳನ್ನು ವಿತರಿಸಲಾಗಿದ್ದು, ಧರಿಸುವಂತೆ ಉಪ-ವಿಭಾಗದ ಅಧಿಕಾರಿಗಳಿಗೆ ಸೂಚಿಸಿದರು |
| 6 | ಪ್ರಸಾದ್, ಕಿಸ್ಸಾನ್ ಸಂಘ, ಶ್ಯಾಗ್ಯ ಗ್ರಾಮ | ಮಾರ್ಟಳ್ಳಿ ಗ್ರಾಮದ ಹಾಲಿ 25ಕೆ.ವಿ.ಎ ಪರಿವರ್ತಕದ (238154) ಕಂಬವು ಶಿಥಿಲಗೊಂಡಿದ್ದು ಮುರಿದು ಬೀಳುವ ಸಾಧ್ಯತೆ ಇರುವುದರಿಂದ ಸದರಿ ಕಂಬವನ್ನು ಬದಲಾಯಿಸಬೇಕೆಂದು ಕೋರಿರುತ್ತಾರೆ. | ಕಾರ್ಯನಿರ್ವಾಹಕ ಇಂಜಿನಿಯರ್(ವಿ)ರವರು ಮಾತನಾಡಿ ಶಾಖಾಧಿಕಾರಿಗಳು ಖುದ್ದು ಸ್ಥಳ ಪರಿಶೀಲಿಸಿ ಬದಲಾಯಿಸುವಂತೆ ಸೂಚಿಸಿದರು. |
| 7 | ಚಂದ್ರು,ವಕೀಲರು ಕುರುಬರದೊಡ್ಡಿ | ಅಜ್ಜೀಪುರ ಹಾಗೂ ಸುತ್ತಮುತ್ತಲ ಗ್ರಾಮಗಳಿಗೆ ಎನ್.ಜೆ.ವೈ ಲೈನ್ ನಲ್ಲಿ ಪದೇಪದೆ ವಿದ್ಯುತ್ ವ್ಯತ್ಯಯ ಉಂಟಾಗುತ್ತಿದ್ದು ಸಣ್ಣ ಮಳೆ ಬಂದರೂ ಸಹ ವಿದ್ಯುತ್ ವ್ಯತ್ಯಯ ಉಂಟಾಗುತ್ತಿದ್ದು, 11ಕೆ.ವಿ.ಎ ಪಿನ್ ಇನ್ಸುಲೇಟರ್ಗಳನ್ನು ಬದಲಾಯಿಸಿ ಗುಣಮಟ್ಟದ ಇನ್ಸುಲೇಟರ್ಗಳನ್ನು ಅಳವಡಿಸಲು ಕೋರಿರುತ್ತಾರೆ. | ಕಾರ್ಯನಿರ್ವಾಹಕ ಇಂಜಿನಿಯರ್(ವಿ)ರವರು ಮಾತನಾಡಿ, ಶಾಖಾಧಿಕಾರಿಗಳು ಸೂಕ್ತ ಕ್ರಮವಹಿಸುವಂತೆ ಸೂಚಿಸಿದರು. |
| 8 | ಪ್ರಸಾದ್, ಕಿಸ್ಸಾನ್ ಸಂಘ, ಶ್ಯಾಗ್ಯ ಗ್ರಾಮ | ಶಾಗ್ಯ ಗ್ರಾಮದ ಹುಚ್ಚೇಗೌಡನ ಬೀದಿಯ ಚಿಕ್ಕೀರಪ್ಪನ ಮನೆಯಮೇಲೆ ವಿದ್ಯುತ್ ಮಾರ್ಗವು ಹಾದುಹೋಗಿದ್ದು ಅಪಾಯ ಸಂಭವಿಸುವ ಸಾಧ್ಯತೆಇರುವುದರಿಂದ ಸದರಿ ವಿದ್ಯುತ್ ಮಾರ್ಗವನ್ನು ಸ್ಥಳಾಂತರಿಸಲು ಕೋರಿರುತ್ತಾರೆ. | ಕಾರ್ಯನಿರ್ವಾಹಕ ಇಂಜಿನಿಯರ್(ವಿ)ರವರು ಮಾತನಾಡಿ, ಶಾಖಾಧಿಕಾರಿಗಳು ಸೂಕ್ತ ಕ್ರಮವಹಿಸುವಂತೆ ಸೂಚಿಸಿದರು. |
| 9 | ಚಂದ್ರು,ವಕೀಲರು ಕುರುಬರದೊಡ್ಡಿ | ಕುರಟ್ಟಿಹೊಸೂರು ಹಾಗೂ ಸುತ್ತಮುತ್ತಲ ಗ್ರಾಮಗಳಿಗೆ ಎನ್.ಜೆ.ವೈ ಲೈನ್ ನಲ್ಲಿ ಪದೇಪದೆ ವಿದ್ಯುತ್ ವ್ಯತ್ಯಯ ಉಂಟಾಗುತ್ತಿದ್ದು ಸಣ್ಣ ಮಳೆ ಬಂದರೂ ಸಹ ವಿದ್ಯುತ್ ವ್ಯತ್ಯಯ ಉಂಟಾಗುತ್ತಿದ್ದು 11ಕೆ.ವಿ.ಎ ಪಿನ್ ಇನ್ಸುಲೇಟರ್ಗಳನ್ನು ಬದಲಾಯಿಸಿ ಗುಣಮಟ್ಟದ ಇನ್ಸುಲೇಟರ್ಗಳನ್ನು ಅಳವಡಿಸಲು ಕೋರಿರುತ್ತಾರೆ. | ಕಾರ್ಯನಿರ್ವಾಹಕ ಇಂಜಿನಿಯರ್(ವಿ)ರವರು ಮಾತನಾಡಿ, ಶಾಖಾಧಿಕಾರಿಗಳು ಸೂಕ್ತ ಕ್ರಮವಹಿಸುವಂತೆ ಸೂಚಿಸಿದರು. |
| 10 | ಚಂದ್ರು,ವಕೀಲರು ಕುರುಬರದೊಡ್ಡಿ | ನಿಗಮದ ಜೆ.ಇ ಹಾಗೂ ಎ.ಇ ಹುದ್ದೆಗಳಿಗೆ ತಾಂತ್ರಿಕ ಪರಿಣಿತಿ ಹೊಂದಿರುವ ವ್ಯಕ್ತಿಗಳನ್ನು ನೇಮಿಸುವಂತೆ ಕೋರಿರುತ್ತಾರೆ. | ಕಾರ್ಯನಿರ್ವಾಹಕ ಇಂಜಿನಿಯರ್(ವಿ)ರವರು ಮಾತನಾಡಿ, ಹಿರಿಯ ಅಧಿಕಾರಿಗಳ ಜೊತೆ ಚರ್ಚಿಸಿ, ಕ್ರಮವಹಿಸುವುದಾಗಿ ತಿಳಿಸಿದರು. |
| 11 | ಬೆಂಜಮಿನ್ ಬಿನ್ ಅಗಸ್ಟಿನ್,ಮಾರ್ಟಳ್ಳಿ. 9449405743 | ಸದರಿಯವರ ಜಮೀನಿನ ಮೂಲಕ ಬೇರೆಯವರಿಗೆ ಅಕ್ರಮವಾಗಿ ನೀರಾವರಿ ಸ್ಥಾವರಕ್ಕೆ ವಿದ್ಯುತ್ ಸಂಪರ್ಕ ನೀಡಿರುತ್ತಾರೆ ಎಂದು ದೂರಿರುತ್ತಾರೆ. | ಕಾರ್ಯನಿರ್ವಾಹಕ ಇಂಜಿನಿಯರ್(ವಿ)ರವರು ಮಾತನಾಡಿ ಶಾಖಾಧಿಕಾರಿಗಳು ಖುದ್ದು ಸ್ಥಳ ಪರಿಶೀಲಿಸಿ ವರದಿ ನೀಡಲು ಸೂಚಿಸಿದರು. |
| 12 | ಲಕ್ಷ್ಮಣ ದಂಟಳ್ಳಿ | ದಂಟಳ್ಳಿ ಗ್ರಾಮದ ಗಿರಿಜನ ಬೀದಿಯ ಮನೆಗಳಿಗೆ ವಿದ್ಯುತ್ ಸಂಪರ್ಕ ಇಲ್ಲ ಹಾಗೂ ಎಲ್.ಟಿ.ಮಾರ್ಗದಲ್ಲಿ ಅಲುಮಿನಿಯಮ್ ವೈರ್ ನ್ನು ಅಳವಡಿಸಿದ್ದು ಬದಲಾಯಿಸಲು ಕೋರಿರುತ್ತಾರೆ. | ಕಾರ್ಯನಿರ್ವಾಹಕ ಇಂಜಿನಿಯರ್(ವಿ)ರವರು ಮಾತನಾಡಿ, ಶಾಖಾಧಿಕಾರಿಗಳು ಸೂಕ್ತ ಕ್ರಮವಹಿಸುವಂತೆ ಸೂಚಿಸಿದರು. |

| | | | |
|---|---|---|---|
| 13 | ರಾಜು, ತಾಲ್ಲೂಕ್ ಪಂಚಾಯಿತಿ ಸದಸ್ಯರು, ಗೋಪಿನಾಥಂ | ಗೋಪಿನಾಥಂ ಗ್ರಾಮದ 100ಕೆ.ವಿ.ಎ. ಪರಿವರ್ತಕದಲ್ಲಿ ಊರಿನ ಲೈಟಿಂಗ್ಸ್, ಕುಡಿಯುವ ನೀರು ಮತ್ತು ನೀರಾವರಿ ಸ್ಥಾವರಗಳಿದ್ದು ಅಧಿಕ ಭಾರದಿಂದ ಪದೇ ಪದೆ ವಿಫಲಗೊಳ್ಳುತ್ತಿದ್ದು ಸದರಿ ಪರಿವರ್ತಕಕ್ಕೆ ಹೆಚ್ಚುವರಿ ಪರಿವರ್ತಕ ಅಳವಡಿಸಿಕೊಡಲು ಕೋರಿರುತ್ತಾರೆ. | ಕಾರ್ಯನಿರ್ವಾಹಕ ಇಂಜಿನಿಯರ್(ವಿ)ರವರು ಮಾತನಾಡಿ, ಹೆಚ್ಚುವರಿ ಪರಿವರ್ತಕವನ್ನು ಅಳವಡಿಸಲು ಕ್ರಮವಹಿಸುವಂತೆ ಶಾಖಾಧಿಕಾರಿಗಳಿಗೆ ಸೂಚಿಸಿದರು. |
| 14 | ಮುರುಗೇಶ್, ಅಧ್ಯಕ್ಷರು,ಗ್ರಾಮ ಪಂಚಾಯ್ತಿ, ಗೋಪಿನಾಥಂ | ಗೋಪಿನಾಥಂ ಗ್ರಾಮದೊಳಗೆ ಶಿಥಿಲಗೊಂಡ ಕಂಬಗಳು ಹಾಗೂ ಮಧ್ಯಂತರ ಕಂಬಗಳನ್ನು ಅಳವಡಿಸಲು ಕೋರಿರುತ್ತಾರೆ. | ಕಾರ್ಯನಿರ್ವಾಹಕ ಇಂಜಿನಿಯರ್(ವಿ)ರವರು ಮಾತನಾಡಿ ಶಾಖಾಧಿಕಾರಿಗಳು ಖುದ್ದು ಸ್ಥಳ ಪರಿಶೀಲಿಸಿ ಬದಲಾಯಿಸುವಂತೆ ಸೂಚಿಸಿದರು. |
| 15 | ಅಲೆಕ್ಸಾಂಡರ್, ವಡ್ಡರದೊಡ್ಡಿ, 8762854343 | ಆಲದಮರದೊಡ್ಡಿ ಗ್ರಾಮದ 63ಕೆ.ವಿ.ಎ. ಪರಿವರ್ತಕವು ಅಧಿಕ ಭಾರದಿಂದ ಪದೇ ಪದೇ ವಿಫಲಗೊಳ್ಳುತ್ತಿದ್ದು ಸದರಿ ಪರಿವರ್ತಕಕ್ಕೆ ಹೆಚ್ಚುವರಿ ಪರಿವರ್ತಕ ಅಳವಡಿಸಿಕೊಡಲು ಕೋರಿರುತ್ತಾರೆ | ಕಾರ್ಯನಿರ್ವಾಹಕ ಇಂಜಿನಿಯರ್(ವಿ)ರವರು ಮಾತನಾಡಿ ಶಾಖಾಧಿಕಾರಿಗಳು ಖುದ್ದು ಸ್ಥಳ ಪರಿಶೀಲಿಸಿ ವರದಿ ನೀಡಲು ಸೂಚಿಸಿದರು. |
| 16 | ಪ್ರಸಾದ್, ಕಿಸ್ಸಾನ್ ಸಂಘ, ಶ್ಯಾಗ್ಯ ಗ್ರಾಮ | ಕೆಲವು ಗ್ರಾಮಗಳಿಗೆ ಮಾತ್ರ ವೈರ್ ಮತ್ತು ಕಂಬಗಳನ್ನು ಬದಲಾಯಿಸಿದ್ದು ಕಂಡುಬಂದಿರುತ್ತದೆ ಅದರಂತೆ ಉಳಿದ ಎಲ್ಲಾ ಗ್ರಾಮಗಳಿಗೂ ವೈರ್ ಮತ್ತು ಕಂಬಗಳನ್ನು ಬದಲಾಯಿಸಲು ಕೋರಿರುತ್ತಾರೆ. | ಕಾರ್ಯನಿರ್ವಾಹಕ ಇಂಜಿನಿಯರ್(ವಿ)ರವರು ಮಾತನಾಡಿ, ಹನೂರು ಪಟ್ಟಣದಲ್ಲಿ ಖಆಖ ಕಾಮಗಾರಿಯು ನಡೆಯುತ್ತಿದೆ ಮತ್ತು ಕೆಲವು ಗ್ರಾಮಗಳಲ್ಲಿ ಬೆಳಕು ಯೋಜನೆಯ ಕಾಮಗಾರಿಯು ನಡೆಯುತ್ತಿದೆ. ಉಳಿದ ಗ್ರಾಮಗಳಿಗೂ ವೈರ್ ಮತ್ತು ಕಂಬಗಳನ್ನು ಬದಲಾಯಿಸುವ ಅವಶ್ಯಕತೆ ಇದ್ದಲ್ಲಿ ಶಾಖಾಧಿಕಾರಿಗಳು ಸ್ಥಳ ಪರಿಶೀಲಿಸಿ ವರದಿ ನೀಡಲು ಸೂಚಿಸಿದರು. |
| 17 | ವೆಂಕಟ, ಬಂಡಳ್ಳಿ 6361377916 | 250 ಕೆ.ವಿ.ಎ ಪರಿವರ್ತಕದಲ್ಲಿ ವೋಲ್ಟೇಜ್ ಸಮಸ್ಯೆ ಇದ್ದು, ಸದರಿ ಪರಿವರ್ತಕದಲ್ಲಿ ವೈರಿಂಗ್ , ಗ್ರೌಂಡಿಂಗ್ ಮತ್ತು ಸದರಿ ಪರಿವರ್ತಕದ ಎಲ್.ಟಿ. ಮಾರ್ಗಗಳು ಜೋತು ಬಿದ್ದಿದ್ದು ಮಧ್ಯಂತರ ಕಂಬಗಳನ್ನು ಅಳವಡಿಸಿ ಸರಿಪಡಿಸಿ ಕೊಡಲು ಕೋರಿರುತ್ತಾರೆ. | ಕಾರ್ಯನಿರ್ವಾಹಕ ಇಂಜಿನಿಯರ್(ವಿ)ರವರು ಮಾತನಾಡಿ ಶಾಖಾಧಿಕಾರಿಗಳು ಸ್ಥಳ ಪರಿಶೀಲಿಸಿ ಸರಿಪಡಿಸುವಂತೆ ಸೂಚಿಸಿದರು. |
| 18 | ವೆಂಕಟ, ಬಂಡಳ್ಳಿ 6361377916 | ಬಂಡಳ್ಳಿ ಗ್ರಾಮವು ಹೆಚ್ಚು ವಿಸ್ತೀರ್ಣವನ್ನು ಹೊಂದಿದ್ದು, ಕಿರಿಯ ಮಾರ್ಗದಾಳುಗಳು ಮಾತ್ರ ಕರ್ತವ್ಯ ನಿರ್ವಹಿಸುತ್ತಿದ್ದು, ಅನುಭವವಿರುವ ಹಾಗೂ ಹೆಚ್ಚುವರಿ ಮಾರ್ಗದಾಳುಗಳನ್ನು ನೇಮಿಸಿ ಕೊಡಲು ಕೋರಿರುತ್ತಾರೆ. | ಕಾರ್ಯನಿರ್ವಾಹಕ ಇಂಜಿನಿಯರ್(ವಿ)ರವರು ಮಾತನಾಡಿ, ಉಪ-ವಿಭಾಗದ ಅಧಿಕಾರಿಯ ಜೊತೆ ಚರ್ಚಿಸಿ, ಕ್ರಮವಹಿಸುವುದಾಗಿ ತಿಳಿಸಿದರು. |
| 19 | ಸುರೇಶ್, ಬೂದುಗುಪ್ಪೆ , 9972838359 | ಬೂದುಗುಪ್ಪೆ ಗ್ರಾಮದ ರಸ್ತೆ ಮಧ್ಯದಲ್ಲಿ ಹಾದುಹೋಗಿರುವ ಮಾರ್ಗಗಳು ಜೋತು ಬಿದ್ದಿದ್ದು, ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು, ಶೀಘ್ರವೇ ಸರಿಪಡಿಸಲು ಕೋರಿರುತ್ತಾರೆ. | ಕಾರ್ಯನಿರ್ವಾಹಕ ಇಂಜಿನಿಯರ್(ವಿ)ರವರು ಮಾತನಾಡಿ ಶಾಖಾಧಿಕಾರಿಗಳು ಸ್ಥಳ ಪರಿಶೀಲಿಸಿ ಸರಿಪಡಿಸುವಂತೆ ಸೂಚಿಸಿದರು. |
| 20 | ಜಾನ್ ಬೋಸ್ಕೊ, ಕಿಸ್ಸಾನ್ ಸಂಘ ತೋಮಿಯಾರ್ ಪಾಳ್ಯ | ಗ್ರಾಹಕರಿಗೆ/ರೈತರಿಗೆ ಇಲಾಖೆಯಿಂದ **ಗ್ರಾಹಕರ ಕೈಪಿಡಿ** ಯನ್ನು ನೀಡಲು ಕೋರಿರುತ್ತಾರೆ | ಕಾರ್ಯನಿರ್ವಾಹಕ ಇಂಜಿನಿಯರ್(ವಿ)ರವರು ಮಾತನಾಡಿ, ಗ್ರಾಹಕರಿಗೆ/ರೈತರಿಗೆ ಇಲಾಖೆಯಲ್ಲಿ ಲಭ್ಯವಿರುಷ್ಟು **ಗ್ರಾಹಕರ ಕೈಪಿಡಿ** ಯನ್ನು ಒದಗಿಸಿಕೊಡುವುದಾಗಿ ತಿಳಿಸಿದರು. |
| 21 | ಜಾನ್ ಬೋಸ್ಕೊ, ಕಿಸ್ಸಾನ್ ಸಂಘ ತೋಮಿಯಾರ್ ಪಾಳ್ಯ | ಹನೂರು ಉಪ ವಿಭಾಗ ವ್ಯಾಪ್ತಿಯ ಎಲ್ಲಾ ಪರಿವರ್ತಕಗಳಲ್ಲಿ ನಿರ್ವಹಣೆ ಕಾರ್ಯವನ್ನು ಮಾಡಿಸಬೇಕು ಮತ್ತು ಸದರಿ ಪರಿವರ್ತಕಗಳ ದುರಸ್ಥಿ ಮಾರ್ಗಗಳನ್ನು ಸರಿಪಡಿಸಲು ಕೋರಿರುತ್ತಾರೆ. | ಕಾರ್ಯನಿರ್ವಾಹಕ ಇಂಜಿನಿಯರ್(ವಿ)ರವರು ಮಾತನಾಡಿ, ಕ್ರಮವಹಿಸುವಂತೆ ಎಲ್ಲಾ ಶಾಖಾಧಿಕಾರಿಗಳಿಗೆ ಸೂಚಿಸಿದರು. |
| 22 | ಜಾನ್ ಬೋಸ್ಕೊ, ಕಿಸ್ಸಾನ್ ಸಂಘ ತೋಮಿಯಾರ್ ಪಾಳ್ಯ | ರಾಮಾಪುರ (ದಿನ್ನಳ್ಳಿ ರಸ್ತೆ) ಯಲ್ಲಿರುವ ಕಬ್ಬಿಣದ ಕಂಬದಲ್ಲಿ 100ಕೆ.ವಿ.ಎ ಪರಿವರ್ತಕವನ್ನು ಅಳವಡಿಸಿದ್ದು, ಪರಿವರ್ತಕವು ರಸ್ತೆಯಲ್ಲಿದ್ದು, ಮಳೆಗಾಲದಲ್ಲಿ ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು, ಶೀಘ್ರವೇ ಬದಲಾಯಿಸಲು ಕೋರಿರುತ್ತಾರೆ. | ಕಾರ್ಯನಿರ್ವಾಹಕ ಇಂಜಿನಿಯರ್(ವಿ)ರವರು ಮಾತನಾಡಿ ಶಾಖಾಧಿಕಾರಿಗಳು ಖುದ್ದು ಸ್ಥಳ ಪರಿಶೀಲಿಸಿ ಬದಲಾಯಿಸುವಂತೆ ಸೂಚಿಸಿದರು. |

| | | | |
|---|---|---|---|
| 23 | ಜಾನ್ ಬೋಸ್ಕೊ, ಕಿಸ್ಸಾನ್ ಸಂಘ ತೋಮಿಯಾರ್ ಪಾಳ್ಯ | ಮುತ್ತಶೆಟ್ಟಿಯೂರು ಗ್ರಾಮದ ಅಂಗನವಾಡಿ ಪಕ್ಕದಲ್ಲಿಯೇ ಪರಿವರ್ತಕವಿದ್ದು, ಮಕ್ಕಳಿಗೆ ತೊಂದರೆಯಾಗುತ್ತಿದ್ದು, ಶೀಘ್ರವೇ ಸ್ಥಳಾಂತರಿಸಲು ಕೋರಿರುತ್ತಾರೆ. | ಕಾರ್ಯನಿರ್ವಾಹಕ ಇಂಜಿನಿಯರ್(ವಿ)ರವರು ಮಾತನಾಡಿ ಶಾಖಾಧಿಕಾರಿಗಳು ಖುದ್ದು ಸ್ಥಳ ಪರಿಶೀಲಿಸಿ ಸೂಕ್ತ ಕ್ರಮವಹಿಸುವಂತೆ ಸೂಚಿಸಿದರು. |

ಮೇಲ್ಕಂಡ ದಿನಾಂಕದಂದು ಜನ ಸಂಪರ್ಕ ಸಭೆಯಲ್ಲಿ ಚರ್ಚಿಸಿದ ವಿಷಯಗಳ ವಿವರಗಳನ್ನು ತಮ್ಮ ಅವಗಾಹನೆಗೆ ಹಾಗೂ ಮುಂದಿನ ಕ್ರಮಕ್ಕೆ ಸಲ್ಲಿಸಲಾಗಿದೆ.

ತಮ್ಮ ವಿಶ್ವಾಸಿ,

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ),
ಚಾ.ವಿ.ಸ.ನಿ.ನಿ., ಉಪವಿಭಾಗ, ಹನೂರು.

<u>ಪ್ರತಿಗಳನ್ನು:</u>

1. ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಚಾವಿಸನಿನಿ, ವಿಭಾಗ ಕಛೇರಿ, ಕೊಳ್ಳೇಗಾಲ,ರವರ ಮಾಹಿತಿಗೆ ಸಲ್ಲಿಸಲಾಗಿದೆ.
2. ಶಾಖಾಧಿಕಾರಿಗಳು, ಹನೂರು/ಲೊಕ್ಕನಹಳ್ಳಿ/ರಾಮಾಪುರ/ಕೌದಳ್ಳಿ/ಮಹದೇಶ್ವರ ಬೆಟ್ಟ, ಶಾಖೆ, ರವರು ಜನ ಸಂಪರ್ಕ ಸಭೆಯಲ್ಲಿ ಚರ್ಚಿತವಾದ ದೂರಗಳಿಗೆ ತೆಗೆದುಕೊಂಡ ಕ್ರಮಗಳ ಬಗ್ಗೆ ಅನುಪಾಲನಾ ವರದಿಯನ್ನು 07 ದಿನಗಳ ಒಳಗಾಗಿ ಸಲ್ಲಿಸಲು ಸೂಚಿಸಲಾಗಿದೆ.
3. ಸ.ಇಂ(ತಾಂ)/ಕಛೇರಿ ಕಡತಕ್ಕೆ.